# ಎಪ್ಪತ್ತು ಶಾಸಕರಿಗೆ ಕರೋನಾ ಸೋಂಕು

## ಮೊದಲ ದಿನದ ಕರೋನಾ ಟೆಸ್ಟ್ ವೇಳೆ 100ಕ್ಕೂ ಹೆಚ್ಚು ಜನರ ವರದಿ ಪಾಸಿಟಿವ್

21/9/20

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ರಾಜ್ಯದಲ್ಲಿ ಕರೋನಾ ಆತಂಕದ ನಡುವೆಯೇ ನಡೆಯುತ್ತಿರುವ ಅಧಿವೇಶನಕ್ಕೆ ಈ ಬಾರಿ ಕರೋನಾ ಛಾಯೆ ಮೂಡಿದೆ. ಕರೋನಾ ಆರಂಭಗೊಂಡ ದಿನದಿಂದ ಇಲ್ಲಿಯವರೆಗೆ ಬರೋಬ್ಬರಿ 70 ಶಾಸಕರಿಗೆ ಕರೋನಾ ತಗುಲಿದೆ ಎಂದು ತಿಳಿದುಬಂದಿದೆ.

ವಿಧಾನಸಭೆಯ ಒಟ್ಟು 225 ಶಾಸಕರ ಪೈಕಿ 70ಕ್ಕೂ ಹೆಚ್ಚು ಜನರಿಗೆ ಕರೋನಾ ಸೋಂಕು ಇರುವುದು ದೃಢಪಟ್ಟಿದೆ. ಇವರ ಪೈಕಿ ಅನೇಕರು ಈಗಾಗಲೇ ಕರೋನಾದಿಂದ ಗುಣಮುಖರಾಗಿದ್ದಾರೆ. ಆದರೆ ಈಗಲೂ 15ಕ್ಕೂ ಹೆಚ್ಚು ಶಾಸಕರು ಕರೋನಾ ಚಿಕಿತ್ಸೆ ಪಡೆಯುತ್ತಿದ್ದಾರೆ ಎನ್ನಲಾಗಿದೆ.

ಕರೋನಾದಿಂದ ಅನೇಕ ಶಾಸಕರು ಗುಣಮುಖರಾಗಿದ್ದರೂ, ಸೋಂಕಿನ ತೀವ್ರ ಹೊಡೆತಕ್ಕೆ ಸಿಲುಕಿದ ಕೆಲ ಶಾಸಕರಲ್ಲಿ ಈಗಲೂ ಸುಸ್ತು ಇದೆ. ಕೆಲವರು ಈಗಾಗಲೇ ಕರೋನಾ ಇರುವುದರಿಂದ ಸದನದಿಂದ ವಿನಾಯಿತಿ ಕೇಳಿದ್ದರೆ ಇನ್ನು ಕೆಲವರು ಯಾವುದೇ ಮಾಹಿತಿ ನೀಡದಿದ್ದರೆ, ಅಧಿವೇಶನಕ್ಕೆ ಹಾಜರಾಗುವುದು ಅನುಮಾನ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಅಧಿವೇಶನ ಸಂದರ್ಭದಲ್ಲಿ ಲಕ್ಷಣ ರಹಿತ ಸೋಂಕು ಉಳ್ಳವರಿಗೂ ಕಲಾಪ ಪ್ರವೇಶ ನಿರ್ಬಂಧಿಸಲಾಗಿದೆ. 4



ಶಾಸಕ ಡಿ.ಕೆ.ಶಿವಕುಮಾರ್ ಅವರನ್ನು ವಿಧಾನಸೌಧದಲ್ಲಿ ಕರೋನಾ ಪರೀಕ್ಷೆಗೊಳಪಡಿಸಲಾಯಿತು.

### ಸಂಸತ್ ಅಧಿವೇಶನ ಮೊಟಕು

ದೆಹಲಿ: ಸಂಸತ್‌ನಲ್ಲಿ ಕರೋನಾ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪ್ರಸಕ್ತ ಅಧಿವೇಶನವನ್ನು ಮೊಟಕುಗೊಳಿಸಲು ಎಲ್ಲ ಪಕ್ಷಗಳು ಸಮ್ಮತಿಸಿವೆ. ಸ್ಪೀಕರ್ ಓಂ ಬಿರ್ಲಾ ಅವರು ಶನಿವಾರ ಕರೆದಿದ್ದ ಕಲಾಪ ಸಲಹಾ ಸಮಿತಿಯ ತುರ್ತು ಸಭೆಯಲ್ಲಿ ಈ ವಿಚಾರದಲ್ಲಿ ಎಲ್ಲ ಪಕ್ಷಗಳು ಸಹಮತ ವ್ಯಕ್ತಪಡಿಸಿದವು. ಸಮಿತಿ ಸಭೆಯಿಂದ ಹೊರಬಂದ ಸದಸ್ಯರೆಲ್ಲರೂ ಇದೇ ಅಭಿಪ್ರಾಯ ವ್ಯಕ್ತಪಡಿಸಿದರು. ಆದರೆ ಅಧಿವೇಶನವನ್ನು ಎಷ್ಟು ಮೊಟಕುಗೊಳಿಸಬೇಕು ಹಾಗೂ ಯಾವಾಗ ಸ್ಥಗಿತಗೊಳಿಸಬೇಕು ಎಂಬುದು ಸ್ಪೀಕರ್ ವಿವೇಚನೆ ಮತ್ತು ನಿರ್ಧಾರವನ್ನು ಅವಲಂಬಿಸಿದೆ.